**ಸಿ.ಸಿ. ಸಂಖ್ಯೆ 2563 / 2024**
**ಪಿ.ಡಬ್ಲೂ -01**

**ದಿನಾಂಕಃ 26.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ವಾಟೀ ಸವಾಲು ಃ- ಶ್ರೀ GNS ಆರೋಪಿ ಪರ ವಕೀಲರಿಂದ**

2022 ರ 7 ನೇ ತಿಂಗಳಿನಲ್ಲಿ ಆರೋಪಿಯು ಹಣ ಕೇಳಿದ್ದರು ಎಂದು ಹೇಳಿದ್ದು ಆ ಸಂಬಂಧ ಏನಾದರೂ ದಾಖಲೆ ಇಟ್ಟುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾವ ಉದ್ದೇಶಕ್ಕಾಗಿ ಹಣ ಬೇಕು ಎಂದು ಹೇಳಿದ್ದರು ಎಂದರೆ ಸಾಕ್ಷಿ ಗಾಡಿ ತೆಗೆದುಕೊಳ್ಳಬೇಕು ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ನೀವು ನಿಮ್ಮ ದೂರಿನಲ್ಲಿ ನನ್ನ ಉಳಿತಾಯ ಹಣದಿಂದ ಮತ್ತು ಸ್ನೇಹಿತರಿಂದ ಹಣ ಪಡೆದು ಆರೋಪಿಗೆ ಕೊಟ್ಟಿರುತ್ತೇನೆ ಎಂದು ಹೇಳಿದ್ದು ಆ ಸಂಬಂಧ ದಾಖಲೆ ಇದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾವ ಸ್ನೇಹಿತರಿಂದ ಹಣ ಪಡೆದಿರುತ್ತೀರಿ ಎಂದರೆ ಸಾಕ್ಷಿ ನನ್ನ ಪತ್ನಿಯ ಸ್ನೇಹಿತರಿಂದ ರೂ.52,500/- ಹಣ ಪಡೆದು ಹಾಗೂ ಉಳಿದ ಹಣವನ್ನು ನಾನು ಸೇರಿಸಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 19.08.2022 ರಂದು ಆರೋಪಿಗೆ ರೂ.5,00,000/- ಹಣವನ್ನು ಕೊಟ್ಟಿರುತ್ತೇನೆ ಎಂದು ಹೇಳಿದ್ದು ಆ ಸಂಬಂಧ ಏನಾದರೂ ದಾಖಲಾತಿ ಇಟ್ಟುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಸದರಿ ರೂ. 5 ಲಕ್ಷ ಹಣವನ್ನು ಯಾರ ಸಮಕ್ಷಮ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ನಾನು ನನ್ನ ಪತ್ನಿ ಮತ್ತು ಆರೋಪಿ ಮಾತ್ರ ಇದ್ದೆವು ಎಂದು ನುಡಿಯುತ್ತಾರೆ. ನಿಮ್ಮ ಪತ್ನಿಯವರ ಸಮಕ್ಷಮ ಹಣ ಕೊಟ್ಟಿರುತ್ತೇನೆ ಎಂದು ದೂರು ಮತ್ತು ಕಾನೂನು ತಿಳುವಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ಆಧಾರದ ಮೇಲೆ ಗಾಡಿ ನಂಬರ್, ಇಂಜಿನ್ ಹಾಗೂ ಚರ್ಸಿ ನಂಬರ್ ಹೇಳಿರುತ್ತೀರಿ ಎಂದರೆ ಸಾಕ್ಷಿ ಆರೋಪಿಯು ನನಗೆ ಗಾಡಿ ನಂಬರ್ ಹೇಳಿದ್ದನು ಅದನ್ನು ನೆನಪು ಇಟ್ಟುಕೊಂಡಿದ್ದೆನು ಆದರೆ ಇಂಜಿನ್ ಮತ್ತು ಚರ್ಸಿ ನಂಬರ್ ನಾನು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಹೊಸ ಗಾಡಿ ಖರೀದಿ ಮಾಡಲು ಎಂದು

ಹೇಳಿದ್ದರ  ಅಥವಾ ಹಳೆ ಗಾಡಿ ಖರೀದಿ  ಮಾಡಲು ಎಂದು ಹೇಳಿದ್ದರ ಎಂದರೆ ಸಾಕ್ಷಿ ಹೊಸ ಗಾಡಿ ಅಥವ  ಹಳೆ ಗಾಡಿ ಖರೀದಿ  ಮಾಡುತ್ತೇನೆ ಎಂದು ಹೇಳಿರುವುದಿಲ್ಲ ಆದರೆ ಗಾಡಿ ಖರೀದಿ ಮಾಡುತ್ತೇನೆ ಹಣ  ಕೊಡು  ಚಿಕ್ಕಪ್ಪ ಎಂದು  ಕೇಳಿದ್ದನು ಎಂದು ನುಡಿಯುತ್ತಾರೆ.ಯಾವ ಆಧಾರದ ಮೇಲೆ ಇಂಜಿನ್ ಮತ್ತು ಚಾಸಿ ನಂಬರ್ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನಾನು  ಹೇಳಿಲ್ಲ ಎಂದು ನುಡಿಯುತ್ತಾರೆ.

ಆರೋಪಿಗೆ  ನೀವು  ಎಷ್ಟು  ವರ್ಷಗಳ ನಂತರ ಹಣ ಕೊಡಿ  ಎಂದು ಕೇಳಿರುತ್ತೀರಿ ಎಂದರೆ ಸಾಕ್ಷಿ  10 ತಿಂಗಳ  ನಂತರ ಎಂದು ನುಡಿಯುತ್ತಾರೆ. ಆರೋಪಿ ಮತ್ತು ನಿಮ್ಮ ನಡುವೆ  ಎಷ್ಟು  ವರ್ಷಗಳ ಮಾತುಕತೆ ಆಗಿತ್ತು ಎಂದರೆ ಸಾಕ್ಷಿ ಆರೋಪಿಯು ಒಂದು ವರ್ಷ ಕಾಲ ಕೊಡಿ ಎಂದು  ಕೇಳಿದ್ದನು ಎಂದು ನುಡಿಯುತ್ತಾರೆ. ಅಂದರೆ ಯಾವ  ದಿನಾಂಕದಂದ ಎಂದು  ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ  8ನೇ ತಿಂಗಳು 2022 ರಿಂದ  8 ನೇ ತಿಂಗಳು 2023ರ ವರೆಗೆ ಎಂದು ನುಡಿಯುತ್ತಾರೆ.  ನಿಮ್ಮ ಪಿರ್ಯಾದಿಯಲ್ಲಿ ದಿನಾಂಕ 05.01.2023 ರಂದು  ಆರೋಪಿಯು ಚೆಕ್  ಅನ್ನು ಕೊಟ್ಟಿರುತ್ತಾರೆ ಎಂದು  ಹೇಳಿರುತ್ತೀರಿ ಎಂದರೆ ಸಾಕ್ಷಿ  ಇಲ್ಲ ಎಂದು ನುಡಿಯುತ್ತಾರೆ. ಯಾವ  ಆಧಾರದ ಮೇಲೆ  ದಿನಾಂಕ  05.01.2023  ಎಂದು ನಿಮ್ಮ ಪಿರ್ಯಾದಿಯಲ್ಲಿ  ಹೇಳುತ್ತಿದ್ದೀರಿ ಎಂದರೆ ಸಾಕ್ಷಿ  ಮಿಸ್  ಆಗಿರಬಹುದು ಆದರೆ ದಿನಾಂಕ 03.10.2023 ಎಂದು ನುಡಿಯುತ್ತಾರೆ. ನಿಮಗೆ ಚೆಕ್ ಯಾವ  ರೀತಿ  ಬಂದಿರುತ್ತದೆ ಎಂದರೆ ಸಾಕ್ಷಿ  ಆರೋಪಿಯೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು  ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ  ದಿನಾಂಕ  03.10.2023 ಎಂದು ನುಡಿಯುತ್ತಾರೆ.  ದಿನಾಂಕ 03.10.2023 ರಂದು  ನಿಮಗೆ  ಚೆಕ್  ಅನ್ನು ಕೊಟ್ಟಿರುತ್ತಾರೆ ಎಂದು ಹೇಳಿದ್ದು  ಏನು ದಾಖಲೆ ಇಟ್ಟುಕೊಂಡಿರುತ್ತೀರಿ ಎಂದರೆ ಸಾಕ್ಷಿ ಚೆಕ್ ಎಂದು ನುಡಿಯುುತ್ತಾರೆ. ಸದರಿ  ಚೆಕ್  ಅನ್ನು  ಎಲ್ಲಿ  ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ  ಅಂದ್ರಹಳ್ಳಿ ಮುಖ್ಯ ರಸ್ತೆಯಲ್ಲಿ ಎಂದು ನುಡಿಯುತ್ತಾರೆ.  ಸಾಕ್ಷಿ ಮುಂದುವರೆದು ಇದು ನಮ್ಮ ಮನೆ ಎಂದು ತೋರಿಸಿ ಮನೆಯ ಮುಂದೆಯೇ  ಚೆಕ್  ಅನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಬ್ಯಾಂಕ್ ಗೆ ನೀವು ಚೆಕ್ ಅನ್ನು ಎಷ್ಟು ಭಾರಿ ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿ 2 ಭಾರಿ ಎಂದು ನುಡಿಯುತ್ತಾರೆ. 2 ಭಾರಿ ಚೆಕ್ ಅನ್ನು ಹಾಜರು ಪಡಿಸಿದಾಗ ಏನೆಂದು ವಾಪಸ್ಸು ಬಂದಿರುತ್ತದೆ ಎಂದರೆ ಸಾಕ್ಷಿ ಮೊದಲನೆ ಭಾರಿ ಹಾಜರು ಪಡಿಸಿದಾಗ ಹಣ ಇಲ್ಲ ಎಂದು ಹಾಗೂ 2 ನೇ ಭಾರಿ ಹಾಜರು ಪಡಿಸಿದಾಗ ಸಹಿ ವ್ಯತ್ಯಾಸ ಇರುತ್ತದೆ ಎಂದು ವಾಪಸ್ಸು ಬಂದಿರುತ್ತದೆ ಎಂದು ನುಡಿಯುತ್ತಾರೆ. ಮೊದಲನೆ ಭಾರಿ ಚೆಕ್ ವಾಪಸ್ಸು ಬಂದಾಗ ಆರೋಪಿಗೆ ಹೋಗಿ ಕೇಳಿರುತ್ತೀರಾ ಎಂದರೆ ಸಾಕ್ಷಿ ಕೇಳಿರುತ್ತೇನೆ ಆಗ ಆರೋಪಿಯು 20 ದಿನ ಬಿಟ್ಟು ಹಾಕಿ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ನೀವು ಆರೋಪಿಯನ್ನು ಬೇಟಿಯಾದಾಗ 20 ದಿನ ಬಿಟ್ಟು ಹಾಕಿ ಎಂದು ಹೇಳಿದ್ದರು ಎಂದು ನಿಮ್ಮ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಗಾಡಿ ಖರೀದಿ ಮಾಡಲು ನಿಮ್ಮಿಂದ ಹಣ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನಿಜ ಇರುತ್ತದೆ ಎಂದು ನುಡಿಯುತ್ತಾರೆ.

ದಿನಾಂಕ 21.08.2022 ರಂದು ಆರೋಪಿಯು ಹೊಸ ಗಾಡಿ ಖರೀದಿ ಮಾಡಲು ರೂ.21,000/-ವನ್ನು ಮಾತ್ರ ಪಾವತಿ ಮಾಡುರುತ್ತಾರೆ ಎಂದರೆ ಸಾಕ್ಷಿ ನನಗೆ ಗೋತ್ತಿರುಎವುದಿದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಗಾಡಿ ಖರೀದಿ ಮಾಡಿದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇರುವುದಿಲ್ಲ ಓರಿಜಿನಲ್ ದಾಖಲೆಗಳನ್ನು ಇಟ್ಟುಕೊಂಡು ಸುಳ್ಳು ದೂರನ್ನು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ನನಗೆ ಯಾವುದೇ ದಾಖಲೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಜುಲೈ 2022 ರಿಂದ ಅಕ್ಟೋಬರ್ 2023 ರವರೆಗೆ ನಿಮ್ಮ ಮತ್ತು ಆರೋಪಿ ನಡವೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸಾಕ್ಷಿ ನಾನು 2022 ರ 8 ನೇ ತಿಂಗಳಿನಲ್ಲಿ ಹಣ ಕೊಟ್ಟಿರುತ್ತೇನೆ ಎಂದು ನುಡಿಯುುತ್ತಾರೆ.

**ಈ ಹಂತದಲ್ಲಿ ಮುಂದುವರೆದ ವಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ . ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**